ಎಫ್.ಡಿ.ಪಿ. ನಂಃ 01/2021
ಆರ್.ಡಬ್ಲ್ಯೂ-1 (ಗೂಳಪ್ಪ)

ದಿನಾಂಕ: 09-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಶ್ರೀ.ಪಿ.ಎಮ್.ಎಚ್. ಎದುರುದಾರ 1ಎ ರವರ ಪರ ವಕೀಲರಿಂದಃ**

ನಾನು ಈಗ 04 ವರ್ಷಗಳಿಂದ ಬಾಗಲಕೋಟಯಲ್ಲಿ ವಾಸ ಇದ್ದೇನೆ. ನಮ್ಮ ತಂದೆಗೆ ಒಟ್ಟು ನನ್ನನ್ನು ಸೇರಿ 05 ಜನ ಮಕ್ಕಳು ಎಂದರೆ ಸರಿ. ಗಂಗವ್ವ, ಸರೋಜನಿ, ಕಸ್ತೂರಿ, ಕಮಲವ್ವ ಇವರು ನನ್ನ ಸಹೋದರಿಯರು ಎಂದರೆ ಸರಿ. ಗಂಗವ್ವ ಮತ್ತು ಕಸ್ತೂರಿ ಇವರನ್ನು ಜಮಖಂಡಿ ತಾಲೂಕಿನ ಹಿಪ್ಪರಗಿ ಗ್ರಾಮಕ್ಕೆ ಕೊಟ್ಟಿರುತ್ತಾರೆ ಎಂದರೆ ಸರಿ. ಗಂಗವ್ವ ಇವರಿಗೆ 03 ಜನ ಮಕ್ಕಳು ಎಂದರೆ ಸರಿ. ಗಂಗವ್ವ ಮತ್ತು ಅವರ ಮಕ್ಕಳು ಹಿಪ್ಪರಗಿಯಲ್ಲಿ ವಾಸ ಇರುತ್ತಾರೆ ಎಂದರೆ ಸರಿ.

2. ಸರೋಜನಿ ಇವರಿಗೆ 03 ಜನ ಮಕ್ಕಳು ಎಂದರೆ ಸರಿ. ಸರೋಜನಿಯವರ ಮಕ್ಕಳ ಪೈಕಿ ಮಂಜುನಾಥ ಹುಬ್ಬಳ್ಳಿಯಲ್ಲಿ ಟಾಟಾ ಕಂಪನಿಯಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. ಅದೇ ರೀತಿ ಇನ್ನೊಬ್ಬ ಮಗ ನೌಕಾಪಡೆಯಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. ನನ್ನ ಇನ್ನೊಬ್ಬ ಸಹೋದರಿ ಕಮಲವ್ವ ಇವರನ್ನು ಬನಹಟ್ಟಿಗೆ ಕೊಡಲಾಗಿದೆ ಎಂದರೆ ಸರಿ. ಸದರಿಯವರು ತಮ್ಮ ಕುಟುಂಬ ಸಮೇತ ಬನಹಟ್ಟಿಯಲ್ಲಿ ವಾಸ ಇದ್ದಾರೆ ಎಂದರೆ ಸರಿ. ನನ್ನ ಶಿಕ್ಷಣ ನಮ್ಮ ತಂದೆಯೇ ಖರ್ಚು ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ತಮ್ಮ ಚಿಕ್ಕಪ್ಪ ಖರ್ಚು ಮಾಡಿರುತ್ತಾರೆ ಎಂದು ಹೇಳುತ್ತಾರೆ. ನಮ್ಮ ತಂದೆಗೆ ಯಾವುದೇ ಆದಾಯ ಇಲ್ಲದೇ ಇದ್ದುದ್ದರಿಂದ ನನ್ನ ವಿದ್ಯಾಭ್ಯಾಸದ ಖರ್ಚನ್ನು ನನ್ನ ಚಿಕ್ಕಪ್ಪ

ನೋಡಿಕೊಂಡಿದ್ದರು. ನಮ್ಮ ತಂದೆಯ ಕಾಲದಲ್ಲಿ ನಮ್ಮ ಕುಟುಂಬಕ್ಕ 120 ಎಕರೆ ಜಮೀನು ಇತ್ತು. ನನ್ನ ವಿದ್ಯಾಭ್ಯಾಸದ ಪೂರ್ತಿ ಖರ್ಚನ್ನು ನಮ್ಮ ತಂದೆ ಮಾಡ್ದಿರೂ ಸಹ ನನ್ನ ಚಿಕ್ಕಪ್ಪ ಮಾಡಿದ್ದಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ನನ್ನ ತಂದೆ ನನಗೆ 20 ಎಕರೆ ಜಮೀನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಹೆಂಡತಿಯ ಹೆಸರು ಗೀತಾ ಎಂದರೆ ಸರಿ. ನನಗೆ ಇಬ್ಬರು ಮಕ್ಕಳು ಎಂದರೆ ಸರಿ. ನನ್ನ ಮಗ ಬಿ.ಇ ಮೆಕ್ಯಾನಿಕಲ್ ಇಂಜಿನಿಯರಿಂಗ್ ಪದವಿ ಮುಗಿಸಿ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿ. ನನ್ನ ಮಗ ಕಳೆದ 02 ವರ್ಷಗಳಿಂದ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದಾರೆ. ನನ್ನ ಮಗಳು ಎಂ.ಬಿ.ಬಿ.ಎಸ್. ಓದಿದ್ದಾಳೆ ಎಂದರೆ ಸರಿ. ನನ್ನ ಮಗಳನ್ನು ತಾವರಗೇರೆಗೆ ಕೊಟ್ಟಿರುತ್ತೇವೆ ಎಂದರೆ ಸರಿ.

4. ನಾನು ಬಿ.ಇ ಆಟೋಮೋಬೈಲ ಪದವಿದರನಿರುತ್ತೇನೆ. ನಾನು ಬಳ್ಳಾರಿ, ಸಿರಗುಪ್ಪಿ  ಹಾಗೂ ಬಾಗಲಕೋಟೆಯಲ್ಲಿ ಸೇವೆ ಸಲ್ಲಿಸಿದ್ದೇನೆ ಎಂದರೆ ಸರಿ. ನಾನು ಬಾಗಲಕೋಟೆಯಲ್ಲಿ ಬಸವೇಶ್ವರ ವಿದ್ಯಾವರ್ಧಕ ಸಂಘದ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದೆ, ಈಗ ನಿವೃತ್ತಿ ಹೊಂದಿದ್ದೇನೆ. ನಾನು ಎನ್.ಸಿ.ಸಿ. ಆಫೀಸರ್ ಮತ್ತು ಹಾಸ್ಟಲ್ ವಾರ್ಡನ್ ಇದ್ದೆ ಎಂದರೆ ಸರಿ. ಬೆಳಗಾವಿಯಲ್ಲಿ ಒಂದು ಮನೆ ಇದೆ ಎಂದರೆ ಸರಿ. ಆ ಮನೆಯನ್ನು ನಾನು ಬಾಡಿಗೆ ಕೊಟ್ಟಿದ್ದು, ತಿಂಗಳಿಗೆ ರೂ.60,000/- ಬಾಡಿಗೆ ಬರುತ್ತದೆ ಎಂದರೆ ಸರಿಯಲ್ಲ.

5. ನನ್ನ ತಂದೆಯ ಔಷಧೋಪಚಾರ ಮತ್ತು ದಿನನಿತ್ಯದ ಖರ್ಚಿಗೆ ದುಡ್ಡು ಕೊಡುತ್ತಿದ್ದೆ ಎಂದು ತೋರಿಸಲು ನಿ.ಆರ್-2 ನ್ನು ಹಾಜರಪಡಿಸಿರುತ್ತೇನೆ. ನನ್ನ ತಂದೆ ನನಗೆ ತಿಂಗಳಿಗೆ ರೂ.2,000/- ಕೊಡಲು ಕೇಳಿದ್ದರು ಆ ರೀತಿ ನಾನು ನನ್ನ ತಂದೆಗೆ ದುಡ್ಡು ಕಳುಹಿಸುತ್ತಿದ್ದೆ. ನಮ್ಮ ತಂದೆಗೆ ಪ್ರತಿ ತಿಂಗಳ ರೂ.2,000/- ಕಳುಹಿಸುತ್ತಿದ್ದ ಬಗ್ಗೆ ನನ್ನ ತಕರಾರಿನಲ್ಲಿ ಬರೆಯಿಸಿಲ್ಲ ಎಂದರೆ ಸರಿ.

6. ನನ್ನ ತಂದೆ ತೀರಿಕೊಳ್ಳುವುದಕ್ಕಿಂತ ಮೊದಲೆ ತಾಯಿ ತೀರಿಕೊಂಡಿರುತ್ತಾರೆ ಎಂದರೆ ಸರಿ. ಮನೆಯಲ್ಲಿ ನಮ್ಮ ತಂದೆಯೆ ಒಬ್ಬರೆ ಇದ್ದರು ಎಂದರೆ ಸರಿ. ದಿಃ 31/05/2008 ರಂದು ನನ್ನ ತಾಯಿ ತೀರಿಕೊಂಡಿರುತ್ತಾರೆ. ನಾನು ಬಾಗಲಕೋಟೆಯಲ್ಲಿ ಇದ್ದಾಗ ನನ್ನ ತಂದೆ ನನ್ನ ಜೊತೆ ಇರುತ್ತಿದ್ದರು. ನಮ್ಮ ತಾಯಿ ತೀರಿಕೊಂಡ ನಂತರ ನಮ್ಮ ತಂದೆಯನ್ನು ಬಾಗಲಕೋಟೆಯಲ್ಲಿ ಇಟ್ಟುಕೊಂಡಿದ್ದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

7. ನನಗು ಹಾಗೂ ನನ್ನ ತಂದೆಗು ಸಂಬಂಧ ಸರಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ತಂದೆಯನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ ಹಾಗೂ ನನ್ನ ತಂದೆಗೆ ನಾನು ಹೊಡೆದು ಮನೆಯಿಂದ ಹೊರಗೆ ಹಾಕಿದ್ದೆ ಎಂದು ರಾಮದುರ್ಗ ನ್ಯಾಯಾಲಯದಲ್ಲಿ ನನ್ನ ತಂದೆ ಜೀವನಾಂಶ ಕೋರಿ ನನ್ನ ಮೇಲೆ ಒಂದು ಅರ್ಜಿ ಸಲ್ಲಿಸಿದ್ದರು ಎಂದರೆ ಸಾಕ್ಷಿದಾರರು ತಮ್ಮ ಸಹೋದರಿ ಸರೋಜನಿ ಒತ್ತಾಯದಿಂದ ನನ್ನ ತಂದೆಯಿಂದ ಅರ್ಜಿ ಸಲ್ಲಿಸಿದ್ದಾಗಿ ಹೇಳುತ್ತಾರೆ.

8. ಸದರಿ ಅರ್ಜಿ ಲೋಕ ಅದಾಲತ್ ಮುಂದೆ ಇತ್ಯರ್ಥಗೊಂಡು ನಾನು ನಮ್ಮ ತಂದೆಗೆ ಜೀವನಾಂಶ ಎಂದು ಪ್ರತಿ ತಿಂಗಳು ರೂ.4,000/- ಕೊಡಲು ಒಪ್ಪಿಕೊಂಡಿದ್ದೆ ಎಂದರೆ ಸರಿ. ನಮ್ಮ ತಂದೆ ತಮ್ಮ ಅರ್ಜಿಯಲ್ಲಿ ತಮ್ಮ ಜೀವನಾಂಶಕ್ಕೆ ರೂ.15,000/- ಜೀವನಾಂಶ ಕೊಡಬೇಕೆಂದು ಕೇಳಿದ್ದರು ಎಂದರೆ ಸರಿಯಲ್ಲ.

9. ನನಗೆ ನಿವೃತ್ತಿ ವೇತನ, ಎನ್.ಸಿ.ಸಿ ಯಿಂದ ದುಡ್ಡು ಹಾಗೂ ಹಾಸ್ಟಲ್ ವಾರ್ಡನ್ ಕೆಲಸ ಮಾಡುತ್ತಿದ್ದುದ್ದರಿಂದ ಅದರಿಂದ ದುಡ್ಡು ಮತ್ತು ಬೆಳಗಾವಿಯಲ್ಲಿ ಮನೆಯಿಂದ ಬಾಡಿಗೆ ಬರುತ್ತಿತ್ತು, ಹೀಗಾಗಿ ನನಗೆ ಸಾಕಷ್ಟು ಆದಾಯ ಇತ್ತು ಎಂದರೆ ಸಾಕ್ಷಿದಾರರು ತಮ್ಮ ಜೀವನ ನಿರ್ವಹಣೆಗೆ ಸಾಕಾಗುವಷ್ಟು ಆದಾಯ ಬರುತ್ತಿತ್ತು ಎಂದು ಹೇಳುತ್ತಾರೆ.

10. ನನ್ನ ಸಹೋದರಿ ಪಾಲು ಕೋರಿ ಸಲ್ಲಿಸಿದ ದಾವೆಯಲ್ಲಿ ನ್ಯಾಯಾಲಯಕ್ಕೆ ಬರುತ್ತಿದ್ದರು ಮತ್ತು ಈ ಅರ್ಜಿಯಲ್ಲಿ ನ್ಯಾಯಾಲಯಕ್ಕೆ ಬರುತ್ತಿದ್ದಾರೆ ಎಂದರೆ ಸರಿ. ಹುಲಕುಂದ ಮತ್ತು ಕಳ್ಳಿಗುದ್ದಿ ಗ್ರಾಮದಲ್ಲಿರುವ ನಮ್ಮ ಕುಟುಂಬಕ್ಕೆ ಸೇರಿದ ಜಮೀನುಗಳ ನಿಖರವಾದ ಸರ್ವೆ ನಂಬರ ಮತ್ತು ಕ್ಷೇತ್ರ ಹೇಳಲು ಬರುವುದಿಲ್ಲ. ಸದರಿ ದಾವೆಯಲ್ಲಿ ನಮ್ಮ ತಂದೆಗೆ 1/6 ಪಾಲು ಬಂದಿರುತ್ತದೆ ಎಂದರೆ ಸರಿ.

11. ಈಗ ಸಾಕ್ಷಿದಾರರಿಗೆ ನಿಪಿ-2ನ್ನು ತೋರಿಸಿ ಅದರಲ್ಲಿ ತಮ್ಮ ತಂದೆಯ ಫೋಟೋ ಇದೆ ಎಂದು ಸೂಚಿಸಿದರೆ ಸಾಕ್ಷಿದಾರರು ನಿಪಿ-2ನ್ನು ನೋಡಿ ಅದರಲ್ಲಿರುವ ಫೋಟೋಗಳು ತಮ್ಮ ತಂದೆಯ ಫೋಟೋಗಳಲ್ಲ ಹಾಗೂ ಸಹಿಗಳು ತಮ್ಮ ತಂದೆಯ ಸಹಿಗಳಲ್ಲ ಎಂದು ಹೇಳುತ್ತಾರೆ.

12. ಅನ್ನಪೂರ್ಣೇಶ್ವರಿ ನನ್ನ ಸಹೋದರಿ ಸರೋಜನಿಯವರ ಮಗಳು ಎಂದರೆ ಸರಿ. ಸರೋಜನಿಯವರು ಧಾರವಾಡದಲ್ಲಿ ವಾಸ ಇದ್ದಾರೆ ಎಂದರೆ ಸರಿ. ನನಗೆ ಸರೋಜನಿಯವರ ವಿಳಾಸ ಗೊತ್ತಿಲ್ಲ. ಆಧಾರ ಕಾರ್ಡನಲ್ಲಿ ಅವರು ಯಾವ ವಿಳಾಸದಲ್ಲಿ ವಾಸ ಇರುತ್ತಾರೊ ಆ ವಿಳಾಸ ನಮೂದಿಸಿರುತ್ತಾರೆ ಎಂದರೆ ಸರಿ. ನನ್ನ ತಂದೆಯ ಆಧಾರ ಕಾರ್ಡ ನಂಬರ ನನಗೆ ಗೊತ್ತಿಲ್ಲ. ನನ್ನ ತಂದೆಯ ಮೋಬೈಲ ನಂ.7483908506 ಎಂದರೆ ನನಗೆ ನೆನಪಿಲ್ಲ. ನನಗು ಮತ್ತು ನನ್ನ ತಂದೆಗು ಸಂಬಂಧ ಸರಿ ಇಲ್ಲದೇ ಇದ್ದುದ್ದರಿಂದ ನನ್ನ ತಂದೆಯ ಮೋಬೈಲ ನಂಬರ ನನ್ನ ಬಳಿ ಇರುವುದಿಲ್ಲ ಎಂದರೆ ಸರಿಯಲ್ಲ.

13. ನಮ್ಮ ತಂದೆ ಧಾರವಾಡದಲ್ಲಿರುವ ನನ್ನ ಸಹೋದರಿ ಸರೋಜನಿಯವರ ಜೊತೆ ಇದ್ದರು ಎಂದರೆ ಸರಿಯಲ್ಲ. ಸರೋಜನಿಯವರ ಮಗಳಾದ ಅನ್ನಪೂರ್ಣೇಶ್ವರಿ ಇವರೊಂದಿಗೆ ನಮ್ಮ ತಂದೆಗೆ ಬಹಳ ಪ್ರೀತಿ ವಿಶ್ವಾಸ ಇತ್ತು ಎಂದರೆ ಸರಿಯಲ್ಲ. ಅನ್ನಪೂರ್ಣೇಶ್ವರಿ ಇವರು ನಮ್ಮ ತಂದೆಯ ಎಲ್ಲ ಆಗು-ಹೋಗುಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಅನ್ನಪೂರ್ಣೇಶ್ವರಿ ಇವರೇ ನಮ್ಮ ತಂದೆಯ ಯೋಗಕ್ಷೇಮ ನೋಡಿಕೊಳ್ಳುತ್ತಾ

ಇದ್ದುದ್ದರಿಂದ ಆಸ್ತಿಯಲ್ಲಿಯ 1/6 ಹಿಸ್ಸೆಯನ್ನು ಅನ್ನಪೂರ್ಣೇಶ್ವರಿ ಇವರಿಗೆ ಕೊಡಬೇಕೆನ್ನುವ ಇಚ್ಚೆ ಇತ್ತು ಎಂದರೆ ಸರಿಯಲ್ಲ. ನಮ್ಮ ತಂದೆ ಅವರ ಕೊನೆಯ ದಿನಗಳಲ್ಲಿಯೂ ಸಹ ಆರೋಗ್ಯವಾಗಿದ್ದರು ಎಂದರೆ ಕೊನೆಯ 01 ವರ್ಷ ಆರೋಗ್ಯ ಸರಿ ಇರಲಿಲ್ಲ ಎಂದು ಹೇಳುತ್ತಾರೆ. ನನ್ನ ಸಹೋದರಿ ಸರೋಜನಿಯವರು ನಮ್ಮ ತಂದೆಯ ಕೊನೆಯ 01 ವರ್ಷದಲ್ಲಿ ಆರೋಗ್ಯ ಸರಿ ಇಲ್ಲದೇ ಇದ್ದಾಗ ನನಗೆ ಅವರಿಗೆ ಸರಿಯಾದ ಚಿಕಿತ್ಸೆ ಕೊಡಿಸಲು ಆಸ್ಪದ ಮಾಡಿಕೊಟ್ಟಿಲ್ಲ. ನಮ್ಮ ತಂದೆಯನ್ನು ಕರೆದುಕೊಂಡು ಬಂದು ನಾನು ಹಿರಿಯರನ್ನು ಸಹ ಕರೆದುಕೊಂಡು ಸರೋಜನಿ ಇವರ ಮನೆಗೆ ಹೋಗಿದ್ದೆ ಆಗ ನಮಗೆ ಮನೆಯ ಒಳಗಡೆಯು ಸಹ ಬಿಟ್ಟುಕೊಳ್ಳಲಿಲ್ಲ. ನನ್ನ ಸಹೋದರಿ ನನ್ನ ತಂದೆಯನ್ನು ನನ್ನ ಜೊತೆ ಕರೆದುಕೊಂಡು ಹೋಗಲು ಬಿಟ್ಟಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

14. ನಮ್ಮ ತಂದೆಯ 1/6 ಹಿಸ್ಸೆಯನ್ನು ನನ್ನ ಸಹೋದರಿಯ ಮಗಳಾದ ಅನ್ನಪೂರ್ಣೇಶ್ವರಿ ಇವರ ಹೆಸರಿಗೆ ತಮ್ಮ ಸ್ವಇಚ್ಚೆಯಿಂದ ಮೃತ್ಯು ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ತಂದೆ ಧಾರವಾಡದಿಂದ ಗೋಕಾಕಗೆ ಕಾರನಲ್ಲಿ ಸಾಕ್ಷಿದಾರರ ಜೊತೆ ಬಂದು ಪತ್ರ ಬರಹಗಾರರಿಗೆ ಮಾಹಿತಿ ಕೊಟ್ಟ ಪ್ರಕಾರ ದಸ್ತು ಬರಹಗಾರರಾದ ಪಿ.ಬಿ.ಹಿರೇಮಠ ಇವರು ಮೃತ್ಯು ಪತ್ರವನ್ನು ತಯಾರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮೃತ್ಯು ಪತ್ರವನ್ನು 27/10/2021 ರಂದು ತಯಾರ ಮಾಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಕಣ್ಣತಪ್ಪಿನಿಂದ ತಪ್ಪಾಗಿ ದಿನಾಂಕವನ್ನು 27/10/2020 ಎಂದು

ನಮೂದಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮೃತ್ಯು ಪತ್ರವು ದಿನಾಂಕ 29/10/2021 ರಂದು ನೋಂದಣಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಮೃತ್ಯು ಪತ್ರಕ್ಕೆ ನಮ್ಮ ತಂದೆ ಸಹಿ ಮಾಡಿದ್ದಾರೆ ಎನ್ನುವ ವಿಷಯ ನನಗೆ ಗೊತ್ತಿದ್ದರೂ ಸಹ ಮೃತ್ಯು ಪತ್ರದಲ್ಲಿರುವ ಸಹಿ ನಮ್ಮ ತಂದೆಯ ಸಹಿ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ್ಯು ಪತ್ರದಲ್ಲಿ ಕಾಣುತ್ತಿರುವ ಫೋಟೋಗಳು ನಮ್ಮ ತಂದೆಯ ಫೋಟೋಗಳು ಇದ್ದರೂ ಸಹ ಅವು ನಮ್ಮ ತಂದೆಯ ಫೋಟೋಗಳು ಅಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

15. ನಿಶಾನೆ ಆರ್-2ರ ಅಡಿ ಹಾಜರಪಡಿಸಿರುವ ರಸೀದಿಗಳು ನ್ಯಾಯಾಲಯದಲ್ಲಿ ಆದೇಶ ಆದ ನಂತರ ದುಡ್ಡು ತುಂಬಿದ್ದರ ರಸೀದಿಗಳು ಎಂದರೆ ಸರಿಯಲ್ಲ. ನಮ್ಮ ತಂದೆಗೆ ನಿಪಿ-2 ರಂತೆ ಮೃತ್ಯು ಪತ್ರ ಬರೆದುಕೊಡುವ ಇಚ್ಚೆ ಇರಲಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ್ಯು ಪತ್ರ ಬರೆಯುವ ಸಮಯದಲ್ಲಿ ನಮ್ಮ ತಂದೆಯ ಮನಸ್ಥಿತಿ ಸರಿ ಇರಲಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆಗೆ ಅನ್ನಪೂರ್ಣೇಶ್ವರಿ ಇವರ ಮೇಲೆ ಯಾವುದೇ ಪ್ರೀತಿ ಇರಲಿಲ್ಲ ಎಯಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅನ್ನಪೂರ್ಣೇಶ್ವರಿ ಇವರು ಖೊಟ್ಟಿ ಮೃತ್ಯು ಪತ್ರ ತಯಾರ ಮಾಡಿಕೊಂಡಿದ್ದಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

16. ತಮ್ಮ ತಂದೆಯ ನಂತರ ಅವರ 1/6 ಆಸ್ತಿಯ ಕುರಿತು ಯಾವುದೇ ತಂಟೆ ಬರಬಾರದು ಎಂದು ತಮ್ಮ ಪಾಲಿನ 1/6 ಆಸ್ತಿಯನ್ನು ಅನ್ನಪೂರ್ಣೇಶ್ವರಿ ಇವರ ಹೆಸರಿಗೆ ಮೃತ್ಯು ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-2 ರಂತೆ ಹಾಜರಪಡಿಸಿದ ಮೃತ್ಯು ಪತ್ರ ಖೊಟ್ಟಿ ಇದೆ ಎಂದು ಹೇಳಿ ನಾನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿಲ್ಲ. ಅನ್ನಪೂರ್ಣೇಶ್ವರಿ ಇವರಿಗೆ ತೊಂದರೆ ಕೊಡಬೇಕೆನ್ನುವ ಉದ್ದೇಶದಿಂದ ಸುಳ್ಳು ತಕರಾರನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗು ಹಾಗೂ ನನ್ನ ತಂದೆಗೆ ಸಂಬಂಧ ಸರಿ ಇರಲಿಲ್ಲ, ಏನಾದರು ಮಾಡಿ ನಮ್ಮ ತಂದೆಯ ಆಸ್ತಿ ಹೊಡೆದುಕೊಳ್ಳಬೇಕೆನ್ನುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಶ್ರೀ.ಎಸ್.ಬಿ.ಎಮ್. ಅರ್ಜಿದಾರ ಪರ ವಕೀಲರಿಂದಃ**

ಅರ್ಜಿದಾರ ಹಾಗೂ ಅವರ ವಕೀಲರು ಗೈರು ಹಾಜರಿ, ಆದ್ದರಿಂದ ಪಾಟೀಸವಾಲು ಏನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)
ಓ ಹೇ ಕೇ ಸರಿ ಇದೆ

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ